ಗಾಯತ್ರಿ, ರಾಜಾಜಿನಗರ
ಪ್ರತಿಮೆಗಳನ್ನು ನಿಲ್ಲಿಸುವುದರ ಉದ್ದೇಶವೇನು?




ಮಲಗಿಸಿದರೆ ಚೆನ್ನಾಗಿ ಕಾಣುವುದಿಲ್ಲವೆಂದು!

ಹಳಿಯೂರು ಪಂಚಾಕ್ಷರಿ, ದಾವಣಗೆರೆ
ಹೆಂಡತಿಯನ್ನು ತೃಪ್ತಿಗೊಳಿಸಲು ಏನು ಮಾಡಬೇಕು?
ಸ್ಸಾರಿ! ಈ ಪ್ರಶ್ನೆಗೆ ಉತ್ತರ ಕೊಡಲು ಈ ಅಂಕಣವಲ್ಲ, ಈ ಪುಸ್ತಕದಲ್ಲೇ ಜಾಗ ಸಾಲದು!

ಜೆ.ಸುಬ್ಬನಾಯಕ, ಬೊಮ್ಮಲಾಪುರ
ವರ್ಷದ ಹನ್ನೊಂದನೆಯ ತಿಂಗಳು ಮಾತ್ರ ಕನ್ನಡ, ಮಿಕ್ಕ ತಿಂಗಳೆಲ್ಲಾ ಏಕೆ ಎನ್ನಡ, ಎಕ್ಕಡ?
1–11 ಎಂಬ ಮೂರು ನಾಮ ಸೂಚಕ ದಿನಾಂಕದಿಂದ ಶುರುವಾಗುವ ತಿಂಗಳೇ ಭಾಷೆಯ ಹೆಸರಲ್ಲಿ ಮೂರು ನಾಮ ಹಾಕಲು ಸೂಕ್ತವಂತೆ!

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ಪಕ್ಷದ ಪ್ರಚಾರಕ್ಕಾಗಿ ರೂಪದರ್ಶಿಗಳ ಹಾಗೆ ಮಂತ್ರಿಗಳು ಕ್ಯಾಟ್ ವಾಕ್ ಮಾಡಿದರೆ?



ಕತ್ತೆಗಳಿಗೆ ಕ್ಯಾಟ್ ವಾಕ್ ಮಾಡಲು ಬರುವುದಿಲ್ಲ.

ಎಂ.ಬಿ.ಖೋದಾನಪೂರ, ಸವದತ್ತಿ
ಪ್ರೇಮಿಸುವಾಗಿನ ಪ್ರೀತಿ ಮದುವೆಯಾದ ಮೇಲೂ ಉಳಿಯುವುದೇ?
ಉಳಿಯುತ್ತದೆ – ಪ್ರೇಮಿಯನ್ನೇ ವರಿಸದಿದ್ದರೆ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
ಕರಡಿಧಾಮ ಮತ್ತು ಪಕ್ಷಿಧಾಮಗಳಂತೆ ಮಂತ್ರಿಧಾಮ ಎಲ್ಲಿದೆ?
ಪ್ರತಿ ಬಿಕ್ಕಟ್ಟಿನ ಸಮಯದಲ್ಲಿ ರೆಸಾರ್ಟುಗಳಲ್ಲಿ!

ಪ್ರವೀಣ ಶಿರೋಳ, ಜಮಖಂಡಿ
ಒಂದು ಹುಡುಗಿಯ ಹೆಸರು, ಪ್ರಾಣಿಯ ಹೆಸರು, ಕನ್ನಡ ಚಿತ್ರದ ಹೆಸರು, ಮೀನಿನ ಹೆಸರು ಇವುಗಳಿಗೆ ಒಂದೇ ಉತ್ತರ ತಿಳಿಸಿ?
ರಂಭೆ.

ಹಾಡ್ಯ ಜಯಾನಂದ, ಮೈಸೂರು
ಸೂರ್ಯನಿಗೆ ಭಯ, ಭಕ್ತಿಯಿಂದ ನಮಸ್ಕಾರ ಮಾಡುತ್ತೇವೆ, ಆದರೆ ಚಂದ್ರನಿಗೆ ಆ ಭಾಗ್ಯವಿಲ್ಲ; ಏಕೆ?
ಉರಿಗಣ್ಣಿನವರಿಗೆ ನಮಸ್ಕರಿಸುವುದೂ, ತಣ್ಣಗಿರುವವರ ಮೇಲೆ ಸವಾರಿ ಮಾಡುವುದೂ ನಮ್ಮ ಸಹಜ ಗುಣ!

ಬಾ.ರಂ.ಸುರೇಶ್, ಶಿವಮೊಗ್ಗ
ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ; ಅತ್ತೆ-ಸೊಸೆಯರ ಜಗಳ?
ಟಿವಿ ಸೀರಿಯಲ್ ಶುರುವಾಗುವ ತನಕ.

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.
ಯಾವ ಕವಿಯೂ ಇದುವರೆಗೆ ವರ್ಣಿಸದಿರುವ ವಸ್ತು ಯಾವುದು?
ನೀವು ಕೇಳಿದಿರಿ ಅಂಕಣ!

ಎಂ.ಎನ್.ಸೋಮಶೇಖರ್, ಮೈಸೂರು
ಸೂರ್ಯನೇ ಇಲ್ಲದೆ ಹೋದರೆ ಜನಜೀವನ ಹೇಗೆ?
ಈಗಲೂ ರಾತ್ರಿ ಸೂರ್ಯ ಇರುವುದಿಲ್ಲವಲ್ಲ, ರಾತ್ರಿಯ ಜೀವನ ಸೊಗಸಾಗೇ ಇದೆ!

ಜಾ.ರು.ಆದಿನಾರಾಯಣ, ಆದಿವಾಲ
ಬದುಕಿನ ಅರ್ಥವೇನು?
ಬದುಕಿನ ರಸ್ತೆ ಮುಗಿಯುವವರೆಗೂ ಕರ್ಮಣ್ಯೇವಾಧಿಕಾ ರಸ್ತೆಯಲ್ಲೇ ಸಾಗುವುದು!

ಎಚ್.ಆನಂದಕುಮಾರ್, ಚಿತ್ರದುರ್ಗ
ರಾಮ್‌ಜೀ, ರಾಜ್ಯಸರ್ಕಾರದ ಭವಿಷ್ಯ ಹೇಳುವಿರಾ?
ಭೂತಗಳೇ ಇರುವ ಸರ್ಕಾರಕ್ಕೆ ಭವಿಷ್ಯವಿರುವುದಿಲ್ಲ ಆನಂದ.

ಮಾಲತಿರಾಜು, ಬೆಂಗಳೂರು
ಹೊಡಿ, ಬಡಿ, ಕಡಿ ಸಂಸ್ಕೃತಿಯ ಅಂತ್ಯ ಯಾವಾಗ?
ಅದು ಸಂಸ್ಕೃತಿಯಲ್ಲ ಎಂದು ಎಲ್ಲರಿಗೂ ಅರಿವಾದಾಗ!

## ಬಹುಮಾನಿತ ಪ್ರಶ್ನೆ

ಕೆ.ಎಂ.ನಾಗರಾಜ್, ಕೆಂಪನಪುರ
ಮದುವೆ ಆಗದೆ ಸುಖವಾಗಿರಲು ಮಾರ್ಗ ಯಾವುದು?
ಬಿಡದಿ ಸ್ವಾಮಿಯಂತೆ ಮಠ ಕಟ್ಟುವುದು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
ಕಷ್ಟಗಳು ಬರುವುದು ಏತಕ್ಕೆ?
ಸುಖದ ಸಿಹಿ ಹೆಚ್ಚಿಸಲಿಕ್ಕೆ!

ಗೀತಾಮೂರ್ತಿ, ಚಿಕ್ಕಬಳ್ಳಾಪುರ
ಹಣದಿಂದ ರಾಜಕೀಯವೋ, ರಾಜಕೀಯದಿಂದ ಹಣವೋ?
ಹಣವಿರುವ ರಾಜಕಾರಣಿಗಳಿಂದ ರಾಜಕೀಯ!

ವಿ. ಹಮೀದ್, ವಿಟ್ಲ
ಮುಟ್ಟಿದ್ರೆ ಮುನಿಯುತ್ತಾಳೇಕೆ ಗುರೂಜೀ?
ಹಮೀದ್‌ನ ಉಮ್ಮೇದ್ ಅವಳಿಗೆ ಗೊತ್ತಂತೆ!

ಟೈಗರ್ ರಾಜೇಂದ್ರ, ದೊಡ್ಡಬಳ್ಳಾಪುರ
ಹೃದಯ ಒಡೆದು ಹೋಗೋದು ಅಂದ್ರೇನು?
ಮನಸ್ಸು ಮುರಿಯುವುದು ಎಂದು!

ರಮೇಶ್, ಹನುಮನಾಳು
ಯಮಧರ್ಮ ಜನರನ್ನು ಕರೆದುಕೊಂಡುಹೋಗುವುದು ಕಾಡುಕೋಣದಲ್ಲೋ, ಊರುಕೋಣದಲ್ಲೋ ಮಿ॥ ರಾಮ್?
ಎರಡೂ ಅಲ್ಲ, ಡಾಕ್ಟರ್‌ಗಳ ಸ್ಕಾಲ್ಪೆಲ್‌ನಲ್ಲಿ, ಕುಡುಕ ಡ್ರೈವರ್‌ಗಳ ಸ್ಟೀರಿಂಗ್‌ನಲ್ಲಿ.

ಜೆ.ಪ್ರದೀಪ ಕುಮಾರ, ಹೂವಿನಹಡಗಲಿ
ಧಾರಾವಾಹಿಗಳಿಗೂ, ಕ್ರಿಕೆಟ್ ಟೂರ್ನಮೆಂಟ್‌ಗಳಿಗೂ ಏನು ವ್ಯತ್ಯಾಸ?
ಕ್ರಿಕೆಟ್ ಟೂರ್ನಮೆಂಟ್ ನಮ್ಮ ಕಣ್ಣೆದುರೇ, ನಮ್ಮ ಕಾಲದಲ್ಲೇ ಮುಗಿದುಹೋಗುತ್ತದೆ.

ಕೌಶಿಕ್‌ರಾಜ್, ಬನ್ನೂರು
ಪುರುಷ ಕವಿಗಳಿಗೆ ವರಕವಿ ಎನ್ನುತ್ತಾರೆ; ಸ್ತ್ರೀ ಕವಿಗಳಿಗೆ?



ವಶಕವಿ! ಎಲ್ಲಾ ಕವಿಗಳೂ ಅವಳ ವಶವೇ!

■ ರಾಮ್